ತಾರೀಖು 26ನೇ ಡಿಸೆಂಬರ್ 1895.

ನಂ. 209.—ಡಿ. ಸಿ.—ಮೈಸೂರು ಸರ್ವಿಸ್ ರೆಗ್ಯುಲೇಷ್ಯಗಳ 188ನೇ ಆರ್ಟಿಕಲ್ ಅನುಸರಿಸಿ, ಮೈಸೂರು ಗವರ್ನಮೆಂಟ್ ಮಿಲಿಟರಿ ಸೆಕ್ರಟರಿ ವ ಮೈಸೂರು ಫೂಜಿನ ಕಮ್ಯಾಂಡೆಂಟರಾದ ಲೆಫ್ಟಿನೆಂಟ್ ಕರ್ನಲ್ ಎ. ಹೆಚ್. ಮೆಕ್ಕಿಟಯರ್ ಯವರಿಗೆ, 1896ನೇ ಇಸವಿ ಜನವರಿ 6ನೇ ತಾರೀಖು ಲಾಗಾಯತು ಮೂರು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 211.—ಡಿ. ಸಿ. ಶ್ರೀಮ್ಮ ಮಹಾರಾಣಿ ರೀಜಂಟರವರು, ಮೈಸೂರು ಯಿಂಪೀರಿಯಲ್ ಸರ್ವಿಸ್ ಕ್ಯಾವೆಲ್ರಿ ಫೂಜಿನ ಕಮ್ಯಾಂಡೆಂಟರಾದ ಲೆಫ್ಟಿನೆಂಟ್ ಕರ್ನಲ್ ಜೆ. ದೇಕರಾಜ ಅರಸಿನವರಿಗೆ, ಲೆಫ್ಟಿನೆಂಟ್ ಕರ್ನಲ್ ಎ. ಹೆಚ್. ಮೆಕ್ಕಿಟಯರ್‌ಯವರು ಪ್ರಿವಿಲೀಜ್ ರಜಾದ ಮೇಲಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ತನಕ, ಅವರ ಕೆಲಸಗಳೊಂದಿಗೆ ಮಿಲಿಟರಿ ಸೆಕ್ರಿಟರಿಯಾಗಿಯೂ, ಮೈಸೂರು ಫೂಜಿನ ಕಮ್ಯಾಂಡೆಂಟರಾಗಿಯೂ ಆಕ್ಟಿಂಗ್ ತರೀಕ ಕೆಲಸ ನೋಡತಕ್ಕದ್ದೆಂದು ನಿಯಮಿಸಿರುತ್ತಾರೆ.

ತಾರೀಖು 3ನೇ ಜನವರಿ 1896.

ನಂ. 7464.—ಜು. 834.—ಮೈಸೂರು ದೇಶದ ಪೊಲೀಸ್ ಇಂಸ್ಪೆಕರ್ ಜನರಲ್‌ರಾದ ಮೆಸ್ಟರ್ ವಿ. ಪಿ. ಮಾಧವರಾಯರವರು, 1896ನೇ ಇಸವಿ ಜನವರಿ 6ನೇ ಮುಕ್ತಂ ಲಾಗಾಯತು ಒಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತಾರೆ.

2. ಮೆಸ್ಟರ್ ಮಾಧವರಾಯರ ಗೈರ್‌ಹಾಜರಿಯಲ್ಲಿ, ಪೊಲೀಸ್ ಸೂಪರಿಂಟೆಂಡೆಂಟರಾದ ಮೆಸ್ಟರ್ ಕೆ. ಪಿ. ಪುಟ್ಟಣ್ಣಶೆಟ್ಟಿಯವರು ಪೊಲೀಸ್ ಇಂಸ್ಪೆಕ್ಟರ್ ಜನರಲ್‌ರವರ ಚಾಲತಿ ಕೆಲಸದ ಚಾರ್ಜನ್ನು ವಹಿಸಿರತಕ್ಕದ್ದು.

ತಾರೀಖು 6ನೇ ಜನವರಿ 1896.

ನಂ. 7500.—ಜು. 839.—ಕಡೂರು ಡಿಸ್ಟ್ರಿಕ್ಟು ಚಿಕ್ಕಮಗಳೂರಿನ ಮುನಸಿಫ್ ಮೆಸ್ಟರ್ ಬಿ. ಶ್ರೀನಿವಾಸರಾಯರಿಗೆ, ಮೈಸೂರ್ ಸರ್ವಿಸ್ ರೆಗ್ಯುಲೇಷ್ಯಗಳ 203 ವ 204ನೇ ಆರ್ಟಿಕಲ್‌ಗಳನುಸರಿಸಿ, 1896ನೇ ಇಸವಿ ಜನವರಿ 6ನೇ ತಾರೀಖಿನಾರಭ್ಯ ಪೂರಾ ತಲಬಿನ ಮೇಲೆ 11 ದಿವಸಗಳು ಮತ್ತು ಅರ್ಧ ತಲಬಿನ ಮೇಲೆ 19 ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಮೆಸ್ಟರ್ ಶ್ರೀನಿವಾಸರಾಯರ ಗೈರ್ ಹಾಜರೀ ಕಾಲದಲ್ಲಿ, ನಗರ ಡಿವಿಜ್ ಡಿಸ್ಟ್ರಿಕ್ಟು ವ ಸೆಷ್ಷ್ ಕೋರ್ಟಿನ ಶಿರಸ್ತೇದಾರ್ ಮೆಸ್ಟರ್ ರಾಮಾನುಜಯ್ಯಂಗಾರ್ರು ಈ ಹೆದರ್ಜೇ ಮುನಸಿಫರಾಗಿ ಆಕ್ಟಿಂಗ್ ತರೀಕ ಕೆಲಸ ನೋಡತಕ್ಕದ್ದು.

ತಾರೀಖು 7ನೇ ಜನವರಿ 1896.

ನಂ. 7570.—ಮಿ. 1096—ಫೆಬ್ರವರಿ ಗುರ್ವೇ ತಾರೀಖು ಮೈಸೂರು ಶ್ರೀಮ್ಮ ಮಹಾರಾಜರವರು ಪಟ್ಟಾಭಿಷಿಕ್ತರಾದ ಶುಭದಿನವಾದುದರಿಂದ ಆ ದಿವಸ ಸಂಸ್ಥಾನಾವುಳಿ ವಟ್ಟು ರಜಾ ದಿವಸವೆಂದು ಆಚರಿಸಲ್ಪಡತಕ್ಕದ್ದು.

ನಂ. 7549.—ಮಿ. ಸೈ. 153—92—ಮೈಸೂರು ಶ್ರೀಮ್ಮಮಹಾರಾಣಿಯವರ ಆಸ್ಪತ್ರೆಯ ಮೂರನೇ ಗ್ರೇಡ್ ಅಸಿಸ್ಟೆಂಟ್ ಸರ್ಜ್ಜ್ ಮಿಸ್. ಆರ್. ಗೋವಿಂದ ರಾಜಲುಯವರಿಗೆ, 1884ನೇ ಇಸವಿ ಮೇ 5ನೇ ಮುಕ್ತಂ 885—7ನೇ ನಂಬರ್ ಗವರ್ನಮೆಂಟ್ ಫ್ರೊಸಿಡಿಂಗ್ಸಿನ ಷರತ್ತುಗಳನುಸರಿಸಿ ಅವರು ಮೂರನೇ ಗ್ರೇಡಿನಲ್ಲಿ ಫಳುವರುಷಗಳ ನೌಕರಿ ಪೂರೈಸಿದ ತಾರೀಖು ಅಂದರೆ 1894ನೇ ಇಸವಿ ಅಕ್ಟೋಬರ್ ಗುರ್ವೇ ತಾರೀಖು ಮೊದಲು ಯರಡನೇ ಗ್ರೇಡ್ ಅಸಿಸ್ಟೆಂಟ್ ಸರ್ಜ್ಜ್ ಕೆಲಸಕ್ಕೆ ಬಡ್ತಿಮಾಡಲ್ಪಟ್ಟಿರುತ್ತೆ.

ಹುಕುಂ ಬಮೋಜೀಬ್,
ವಿ. ಎಸ್. ನರಸಿಂಹಯ್ಯಂಗಾರ್,
ಜನರಲ್ ಸೆಕ್ರಿಟರಿ.

ಮಿಲಿಟರಿ.

ತಾರೀಖು 31ನೇ ಡಿಸೆಂಬರ್ 1895.

ಶ್ರೀಮ್ಮ ಮಹಾರಾಣಿ ರೀಜಂಟ್ ಸಿ. ಐ. ಯವರು, ಜಮಾದಾರ್ ಲಿಂಗರಾಜ ಅರಸಿನವರನ್ನು, ಪೆಷ್ಷ ಮೇಲೆ ಕೆಲಸದಿಂದ ನಿವೃತ್ತರಾದ ಖಾನ್‌ಬಹದೂರ್ ಬುದರುದ್ದೀನ್ ಯವರಿಗೆ ಬದಲಾಗಿ, 1896ನೇ ಇಸವಿ ಜನವರಿ 1ನೇ ತಾರೀಖಿನಾರಭ್ಯ ಶ್ರೀಮ್ಮ ಮಹಾರಾಣಿಯವರ ಖಾಸ್ ಬಾಡೀಗಾರ್ಡಿನ ಕಮ್ಯಾಂಡೆಂಟರಾಗಿ ಮೊಕರರ್ರಾಡಿರುತ್ತಾರೆ.

ಹುಕುಂ ಬಮೋಜೀಬ್,
ಜೆ. ದೇಶೀರಾಜ್ ಅರಸ್,
ಲೆ॥ ಕರ್ನಲ್ ವ ಆ॥ ಮಿಲಿಟರಿ ಸೆಕ್ರಿಟರಿ.